ಶ್ರೀ ಗಣೇಶ ಶಾರದ ಗುರುಭ್ಯೋ ನಮಃ


# ಶೃಂಗೇರಿ – ಸುಪ್ರಭಾತ ಸೇವೆ

**ಪ್ರಾತಃ ಸ್ಮರಾಮಿ ಲಲಿತಾವದನಾರವಿಂದಂ ಬಿಂಬಾಧರಂ**

**ಪೃಥುಲಮೌಕ್ತಿಕಶೋಭಿನಾಸಮ್ ।**

**ಆಕರ್ಣದೀರ್ಘನಯನಂ ಮಣಿಕುಂಡಲಾಢ್ಯಂ ಮಂದಸ್ಮಿತಂ**

**ಮೃಗಮದೋಜ್ಜ್ವಲಫಾಲದೇಶಮ್ ॥**





ಪ್ರಾತಃಕಾಲ, ಶೃಂಗೇರಿ, ಎಡಗಡೆಯಲ್ಲಿ ಹರಿಯುತ್ತಿರುವ ತುಂಗಾನದಿಯಿಂದ ಬೀಸುತ್ತಿರುವ ತಂಗಾಳಿ. ಬಲಗಡೆ ನಸುಗತ್ತಲಿನಲ್ಲಿ ವಿರಾಜಿಸುತ್ತಿರುವ ಭವ್ಯವಾದ ರಾಜಗೋಪುರ. ಜಗದ್ಗುರು ಶ್ರೀ ಶಂಕರ ಭಗವತ್ಪಾದರು ತಮ್ಮ ಪ್ರಥಮ ಆಮ್ನಾಯ ಪೀಠವನ್ನು ಪ್ರಾಚೀನ ಋಷಿಮುನಿಗಳ ತಪೋವನಗಳ ಪವಿತ್ರ ಸ್ಥಾವರ ಶೃಂಗೇರಿಯಲ್ಲಿ ಸ್ಥಾಪಿಸಲು ನಿಶ್ಚಯಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ ಎಂದುಕೊಳ್ಳುತ್ತಾ ಸಮುನ್ನತವಾದ ರಾಜಗೋಪುರಕ್ಕೆ ನಮಸ್ಕಾರ ಮಾಡಿ, ವಿಶಾಲವಾದ ಪ್ರಾಂಗಣದಲ್ಲಿ ಕಾಣುತ್ತಿರುವ ಅಪೂರ್ವವಾದ ಶ್ರೀ ವಿದ್ಯಾಶಂಕರ ದೇವಾಲಯ, ಪರಮ ಪವಿತ್ರವಾದ ಶ್ರೀ ಶಾರದಾ ಮಾತೆಯ ದೇವಾಲಯ, ಎಲ್ಲವನ್ನೂ ನೋಡುತ್ತಾ, ಬಲಗಡೆಯಿರುವ ದಾರಿಯಲ್ಲಿ ನಡೆದು

ಜಗದ್ಗುರು ಶ್ರೀ ನೃಸಿಂಹಭಾರತೀ ಮಹಾಸ್ವಾಮಿಗಳವರು ತಮ್ಮ ಅನುಷ್ಠಾನ, ಪೂಜೆ ಇತ್ಯಾದಿಗಳನ್ನು ನೆರವೇರಿಸುತ್ತಿದ್ದ, ಬೆಳ್ಳಿಯ ದ್ವಾರದ ಮೇಲ್ಭಾಗದಲ್ಲಿರುವ ಶ್ರೀ ತೋರಣ ಗಣಪತಿಯನ್ನು, ಸ್ತುತಿಸುತ್ತಾ,




ನಮೋ ನಮೋ ಕಾರಣ ಕಾರಣಾಯ ನಮೋ ನಮೋ ತ್ರಾಹಿ ಕೃಪಾಕರಾಯ।
ನಮೋ ನಮೋ ಶೀಘ್ರ ವರಪ್ರದಾಯ ತಸ್ಮೈ ಗಣೇಶಾಯ ಸದಾ ನಮಸ್ತೇ॥

ಎಂದು ಪ್ರಾರ್ಥಿಸಿ, ಸಕಲ ಕಾಮನೆಗಳನ್ನು ಈಡೇರಿಸುವ ಸರ್ವ ವಿಘ್ನನಿವಾರಕನಾದ ಈ ಮಹಿಮಾನ್ವಿತ ಗಣಪತಿಯನ್ನೇ ಅಲ್ಲವೇ, ಗುರುಗಳು ಪ್ರಾರ್ಥಿಸಿ, ಆ ಸಮಯದಲ್ಲಿ ಶ್ರೀಮಠಕ್ಕೆ ಉಂಟಾದ ಘೋರವಾದ ಕಷ್ಟವನ್ನು ಪರಿಹಾರ ಮಾಡಿಕೊಂಡಿದ್ದು, ಆಹಾ ಎಂದು ಆ ಐತಿಹ್ಯವನ್ನು ನೆನೆದು, ಜನಜಂಗುಳಿಯಿಲ್ಲದೇ ಪ್ರಶಾಂತವಾಗಿ ಖಾಲಿಯಾಗಿರುವ ಪ್ರಸಾದ ಕೌಂಟರ್, ಟಿಕೆಟ್ ಕೌಂಟರ್ ಗಳನ್ನೆಲ್ಲಾ ದಾಟಿಕೊಂಡು,

ಪ್ರಾತರ್ಭಜಾಮಿ ಲಲಿತಾಭುಜಕಲ್ಪವಲ್ಲೀಂ
ರಕ್ತಾಂಗುಳೀಯಲಸದಂಗುಳಿಪಲ್ಲವಾಢ್ಯಾಮ್ ।
ಮಾಣಿಕ್ಯಹೇಮವಲಯಾಂಗದಶೋಭಮಾನಾಂ

ಪುಂಡ್ರೇಕ್ಷುಚಾಪಕುಸುಮೇಷುಸೃಣೀರ್ದಧಾನಾಮ್ ॥

ಎಂದು ಧ್ಯಾನಿಸುತ್ತಾ, ಶ್ರೀ ಶಾರದಾ ದೇಗುಲದ ಪೂರ್ವ ದಿಕ್ಕಿನಲ್ಲಿರುವ ಮುಚ್ಚಿರುವ ಪ್ರಧಾನ ದ್ವಾರದ ಎದುರು ನಿಂತು, ಈ ಪವಿತ್ರ ಸ್ಥಳದಲ್ಲೇ ಜಗದ್ಗುರು ಶ್ರೀ ಶಂಕರ ಭಗವತ್ಪಾದರಿಗೆ ಸರ್ಪವೊಂದು ಬಿಸಿಲಿನ ತಾಪದಲ್ಲಿ ಬಸವಳಿಯುತ್ತಿದ್ದ ಗರ್ಭಿಣಿ ಕಪ್ಪೆಗೆ ನೆರಳು ನೀಡಲು ತನ್ನ ಹೆಡೆಯನ್ನು ಎತ್ತಿದ್ದ ಅಸಮಾನ್ಯ ದೃಶ್ಯವನ್ನು ಕಂಡಿದ್ದು ಎಂದು ಸ್ಮರಿಸಿ,

ಶೃತಿಸ್ಮೃತಿ ಪುರಾಣಾನಾಂ ಆಲಯಂ ಕರುಣಾಲಯಮ್।
ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಮ್॥

ಎಂದು ಶ್ರೀ ಶಂಕರ ಭಗವತ್ಪಾದರಿಗೆ ವಂದಿಸಿ, ಸಹಜ ಶತೃಗಳೂ ಪರಸ್ಪರ ಪ್ರೀತಿಯಿಂದ ಬಾಳುವಂತೆ ಮಾಡುವ ಈ ಅಸಾಧಾರಣ ಕ್ಷೇತ್ರ, ನಮ್ಮ ಮನಸ್ಸಿನಲ್ಲಿರುವ ಕೋಪತಾಪ, ಈರ್ಷ್ಯೆ, ಅಸೂಯೆ, ರಾಗ-ದ್ವೇಷಗಳ ಗಾಢ ಕತ್ತಲಿಗೆ ಬೆಳಕಾಗಲಿ ಎಂದು ಬೇಡುತ್ತಾ,

ಪ್ರಾತರ್ನಮಾಮಿ ಲಲಿತಾಚರಣಾರವಿಂದಂ
ಭಕ್ತೇಷ್ಟದಾನನಿರತಂ ಭವಸಿಂಧುಪೋತಮ್ ।
ಪದ್ಮಾಸನಾದಿಸುರನಾಯಕಪೂಜನೀಯಂ
ಪದ್ಮಾಂಕುಶಧ್ವಜಸುದರ್ಶನಲಾಂಛನಾಢ್ಯಮ್ ॥

ಎಂದು ಪ್ರಾರ್ಥಿಸುತ್ತಿರುವಾಗ, ಠಣ್, ಠಣ್, ಠಣ್, ಠಣ್, ಠಣ್, ಠಣ್, ಠಣ್, ಎಂದು ಘಂಟೆಯ ನಾದ ಮೊಳಗುತ್ತಿರುವಾಗಲೇ ಪ್ರಧಾನ ದ್ವಾರದ ಬಾಗಿಲುಗಳು ತೆರೆದುಕೊಂಡು ಶ್ರೀ ಶಾರದಾಂಬೆಯ ಗರ್ಭಗೃಹದ ದರ್ಶನ. ದೇಗುಲದ ಮೆಟ್ಟಿಲಿಗೆ ಶಿರಬಾಗಿ ವಂದಿಸಿ ಒಳಗಡೆ ಕಾಲಿಟ್ಟ ತಕ್ಷಣವೇ, ವಿಸ್ತಾರವಾದ ರಂಗಮಂಟಪದ ದೃಶ್ಯ. ಎಡಬಲಗಳಲ್ಲಿರುವ ಶಿಲಾ ಮಂಟಪಗಳನ್ನು ದಾಟಿ, ರಂಗಮಂಟಪದಲ್ಲಿರುವ ನಾನಾ ರೀತಿಯ ಕೆತ್ತನೆಗಳಿಂದ ಕೂಡಿದ ಕಂಬಗಳನ್ನು ಕಣ್ತುಂಬಾ ನೋಡುತ್ತಾ, ದೇವಿಯ ಸ್ಮರಣೆ ಮಾಡುತ್ತಾ,

ಪ್ರಾತಃ ಸ್ತುವೇ ಪರಶಿವಾಂ ಲಲಿತಾಂ ಭವಾನೀಂ

ತ್ರಯ್ಯಂತವೇದ್ಯವಿಭವಾಂ ಕರುಣಾನವದ್ಯಾಮ್ ।
ವಿಶ್ವಸ್ಯ ಸೃಷ್ಟವಿಲಯಸ್ಥಿತಿಹೇತುಭೂತಾಂ
ವಿದ್ಯೇಶ್ವರೀಂ ನಿಗಮವಾಙ್ಮನಸಾತಿದೂರಾಮ್ ॥

ಎನ್ನುತ್ತಾ, ನಿಧಾನವಾಗಿ ಮೆಟ್ಟಿಲು ಹತ್ತಿ ಗರ್ಭಗೃಹದ ಮುಂದೆ ಕುಳಿತ ತಕ್ಷಣ ಅರ್ಚಕ ಮಹಾಸ್ವಾಮಿಗಳು ಸುಶ್ರಾವ್ಯವಾಗಿ ಸ್ತುತಿಸುತ್ತಿರುವ ಶ್ರೀ ಶಾರದಾ ಪರಮೇಶ್ವರಿಯ ಸುಪ್ರಭಾತವನ್ನು ಕೇಳುತ್ತಾ,

ಶ್ರೀಶಾರದೇ ಜಗನ್ಮಾತಃ ಪೂರ್ವಾ ಸಂಧ್ಯಾ ಪ್ರವರ್ತತೇ ।
ಉತ್ತಿಷ್ಠ ಕರುಣಾಪಾಂಗೈಃ ಕರ್ತವ್ಯಂ ವಿಶ್ವಮಂಗಲಂ ॥
ಶ್ರೀಶೃಂಗಾದ್ರಿಪುರೀರತ್ನಸಿಂಹಾಸನನಿವಾಸಿನಿ ।
ಉತ್ತಿಷ್ಠ ಶಾರದಾಂಬ ಶ್ರೀಶಂಕರಾಚಾರ್ಯಸನ್ನುತೇ ॥
ಉತ್ತಿಷ್ಠೋತ್ತಿಷ್ಠ ಭಗವತ್ಪಾದಶಂಕರಮೂರ್ತಿಭಿಃ ।
ಜಗದ್ಗುರುಭಿರಾರಾಧ್ಯೇ ಜಗಜ್ಜನನಿ ಶಾರದೇ ॥

ಶ್ರೀ ಜಗದ್ಗುರು ಶಂಕರ ಭಗವತ್ಪಾದರು ತುಂಗಾನದಿ ತೀರದ ಕಲ್ಲುಬಂಡೆಯೊಂದರ ಮೇಲೆ ಶ್ರೀಚಕ್ರ ಯಂತ್ರವನ್ನು ಕೆತ್ತಿ, ಅದರ ಮೇಲೆ ಶ್ರೀಗಂಧದ ಶಾರದಾಂಬೆಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದನ್ನು ಸ್ಮರಿಸುತ್ತಾ,

ಬ್ರಹ್ಮರ್ಷಯೋಽಂಬ ಸನಕಾದಯ ಏತ್ಯ ಭಕ್ತ್ಯಾ
ಬ್ರಾಹ್ಮೀಮನನ್ಯಮನಸೋ ಹೃದಿ ಬ್ರಹ್ಮವಿದ್ಯಾಂ ।
ತ್ವಾಮಾಮನಂತ್ಯುಪನಿಷತ್ಸರಸೀಜಹಂಸೀಂ
ಶ್ರೀಶಾರದಾಂಬ ವರದೇ ತವ ಸುಪ್ರಭಾತಂ ॥

ಎನ್ನುತ್ತಾ, ಪ್ರಸ್ತುತ ನೆಲೆಸಿರುವ ಶ್ರೀ ಶಾರದಾ ಪರಮೇಶ್ವರಿಯ ದಿವ್ಯ ವಿಗ್ರಹವನ್ನು ಪರಮಪೂಜ್ಯ ಜಗದ್ಗುರುಗಳಾದ ಶ್ರೀ ವಿದ್ಯಾರಣ್ಯ ಮಹಾಸ್ವಾಮಿಗಳು ಪ್ರತಿಷ್ಠಿಸಿದ್ದನ್ನು ನೆನೆಯುತ್ತಾ,

ಶ್ರೀಚಂದ್ರಶೇಖರಜಗದ್ಗುರುಸಾರ್ವಭೌಮ ಶ್ರೀಪಾಣಿಪದ್ಮಜಜಗದ್ಗುರುಸಾರ್ವಭೌಮ್ಯೈಃ।
ತತ್ಪಾಣಿಪಂಕಜಸಮುತ್ಥಗುರೂತ್ತಮೈಶ್ಚ ಶ್ರೀಶಾರದಾಂಬ ವಿನುತೇ ತವ ಸುಪ್ರಭಾತಂ ॥

ಎಂದು ಪ್ರಾರ್ಥಿಸಿ, ಹೆಂಚಿನ ಛಾವಣಿಯಿಂದ ಮರದ ಕಟ್ಟಡವಾಗಿದ್ದ ಶ್ರೀ ಶಾರದೆಯ ಗುಡಿಯನ್ನು ಭವ್ಯವೂ, ವಿಶಾಲವೂ ಆದ ಶಿಲ್ಪಕಲಾಮಯ ದೇಗುಲವನ್ನಾಗಿ ಪರಿವರ್ತಿಸಬೇಕೆಂಬ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳ ಸಂಕಲ್ಪವನ್ನು, ಅವರ ಉತ್ತರಾಧಿಕಾರಿಗಳಾದ ಜಗದ್ಗುರು ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳು ಪೂರೈಸಿದ್ದನ್ನು ಸ್ಮರಿಸುತ್ತಾ,

ಯೇ ಸಜ್ಜನಾ ಅನುದಿನಂ ಮುದಿತಾಃ ಪ್ರಭಾತೇ
ಭಕ್ತ್ಯಾ ಪಠಂತಿ ಪರಯಾ ಭುವಿ ಶಾರದಾಯಾಃ।
ಶ್ರೀ ಸುಪ್ರಭಾತವಿನುತಿಂ ಸಕಲೈರ್ವಿಮುಕ್ತಾಃ
ಕ್ಲೇಶೈಃ ಪ್ರಯಾಂತಿ ಪುರುಷಾರ್ಥಚತುಷ್ಟಯಂ ದ್ರಾಕ್ ॥
ಯೇ ಸುಪ್ರಭಾತಮಿದಮಾಶ್ರಿತವತ್ಸಲಾಯಾಃ
ಶ್ರದ್ಧಾಯುತಾ ಅನುದಿನಂ ಹೃದಿ ಶಾರದಾಯಾಃ।
ಪ್ರಾತಃ ಪಠಂತಿ ಮನುಜಾ ಜಗದಂಬಿಕಾಯಾಃ
ತೇ ಪ್ರಾಪ್ನುವಂತಿ ಸುಜನಾಸ್ಸಕಲಾನಭೀಷ್ಟಾನ್ ॥
ಶ್ರೀಶಾರದಾಸುಪ್ರಭಾತಸ್ಮರಣಾತ್ಕರುಣಾನಿಧಿಃ।
ಪಾರದಾ ಸ್ಯಾತ್ ಕ್ಷಣೇನೈವಾಪಾರಸಂಸಾರವಾರಿಧೇಃ ॥

ಎಂದು ಪ್ರಾರ್ಥಿಸುತ್ತಾ, ನನ್ನ ಅಮ್ಮ ದಿನಾಗಲೂ ಬೆಳಗ್ಗೆ ಸತತವಾಗಿ ಐವತ್ತು ವರ್ಷಗಳಿಂದ ಶಾರದಾ ಸುಪ್ರಭಾತವನ್ನು ಶ್ರದ್ಧಾಭಕ್ತಿಯಿಂದ ಪಾರಾಯಣೆ ಮಾಡುತ್ತಿರುವುದನ್ನು ನೆನಪು ಮಾಡಿಕೊಳ್ಳುತ್ತಿರುವಾಗಲೇ ಗರ್ಭಗೃಹದ ಬಾಗಿಲು ತೆರೆದು, ಶ್ವೇತವರ್ಣದ ಒಡಲಿಗೆ, ರಕ್ತವರ್ಣದ ದೊಡ್ಡ ಜರೀ ಅಂಚು ಇರುವ ಪೀತಾಂಬರವನ್ನು ಧರಿಸಿರುವ ಶ್ರೀ ಶಾರದಾ ಪರಮೇಶ್ವರಿಯ ಸಾಕ್ಷಾತ್ಕಾರ.

ಪ್ರಾತರ್ವದಾಮಿ ಲಲಿತೇ ತವ ಪುಣ್ಯನಾಮ ಕಾಮೇಶ್ವರೀತಿ ಕಮಲೇತಿ ಮಹೇಶ್ವರೀತಿ |
ಶ್ರೀಶಾಂಭವೀತಿ ಜಗತಾಂ ಜನನೀ ಪರೇತಿ ವಾಗ್ದೇವತೇತಿ ವಚಸಾ ತ್ರಿಪುರೇಶ್ವರೀತಿ ||

ಎಂದು ಪ್ರಾರ್ಥಿಸಿ, ಪ್ರಜ್ವಲಿಸುತ್ತಿರುವ ಕಿರೀಟ, ತೇಜೋಮಯವಾದ ವದನ, ಲಲಾಟದಲ್ಲಿ ಶೋಭಿಸುತ್ತಿರುವ ಕಸ್ತೂರಿ ತಿಲಕ, ಉಜ್ವಲವಾದ ಕಣ್ಣುಗಳು, ಕೆಳಗೆ ಫಳ ಫಳ ಹೊಳೆಯುತ್ತಿರುವ ಮೂಗುತಿ, ಮಣಿಕುಂಡಲಗಳು, ಮುಗ್ಧ ಮುಗುಳ್ನಗೆ, ವಕ್ಷಸ್ಥಳದಲ್ಲಿ ತೂಗಾಡುತ್ತಿರುವ ಮುತ್ತಿನ ಹಾರ, ಮಾಣಿಕ್ಯಯುಕ್ತ ಸುವರ್ಣ ಕಂಕಣಗಳು, ದೊಡ್ಡ ದೊಡ್ಡ ಮಲ್ಲಿಗೆ, ಗುಲಾಬಿ ಹಾರಗಳಿಂದ ಸರ್ವಾಲಂಕೃತಳಾದ ವಿದ್ಯೇಶ್ವರಿಯ ದಿವ್ಯ, ಭವ್ಯ ದರ್ಶನವನ್ನು ಮಾಡುತ್ತಾ, ನಮ್ಮ ವಾಕ್ಕು, ಮನಸ್ಸುಗಳನ್ನು ನಿಗ್ರಹಿಸುವ ಶಕ್ತಿಯನ್ನು ದಯಪಾಲಿಸು ಮಾತೆ ಎಂದು ಪ್ರಾರ್ಥಿಸುತ್ತಾ, ಅರ್ಚಕ ಮಹಾಸ್ವಾಮಿಗಳು ಮಾಡುತ್ತಿರುವ ಷೋಡಶೋಪಚಾರ ಪೂಜೆಯನ್ನು ವೀಕ್ಷಿಸುತ್ತಾ, ಶ್ರೀ ಶಾರದಾಂಬೆಯ ಚರಣಕಮಲಗಳಲ್ಲಿ ಬೀಳುತ್ತಿರುವ ಪ್ರತಿ ಪುಷ್ಪದ ಭಾಗ್ಯವನ್ನು ಅನುಭವಿಸುತ್ತಾ, ಇವಳ ದಿವ್ಯ ಉಪಸ್ಥಿತಿಯಲ್ಲವೇ ಶ್ರೀಮಠಕ್ಕೆ ಶ್ರೀರಾಮರಕ್ಷೆ ಎಂದು ನಮಿಸುತ್ತಾ, ಈ ಪವಿತ್ರ ಪೀಠದ ಆಚಾರ್ಯರನ್ನು ಪ್ರೇರೇಪಿಸಿ ಮಾರ್ಗದರ್ಶನ ಮಾಡುತ್ತಿರುವ ಶ್ರೀ ಶಾರದಾ ಪರಮೇಶ್ವರಿಯ ಹಸ್ತಗಳಲ್ಲಿರುವ, ಅಮೃತತತ್ವದ ಸಂಕೇತವಾದ ಅಮೃತ ತುಂಬಿದ ಕಳಶ, ಪರಾವಿದ್ಯೆಯ ಪ್ರತೀಕವಾದ ಪುಸ್ತಕ, ವಿಶ್ವದ ಸ್ಥೂಲರೂಪವಾದ ಅಕ್ಷರಗಳನ್ನು ಪ್ರತಿನಿಧಿಸುವ ಜಪಮಾಲೆ ಮತ್ತು ಜೀವ ಬ್ರಹ್ಮೈಕತ್ವ ಜ್ಞಾನದ ಪ್ರತೀಕವಾಗಿರುವ ಚಿನ್ಮುದ್ರೆಗಳನ್ನು ನೋಡಿ, ಮನತುಂಬಿಕೊಂಡು, ಸೀರೆಯ ನೆರಿಗೆಯ ಮರೆಯಲ್ಲಿ ಕಾಣುತ್ತಿರುವ ಪಾದ ಪಂಕಜಗಳಿಗೆ ವಂದಿಸಿ, ಅವಳು ಪ್ರಸನ್ನಳಾಗಿ ದಯಪಾಲಿಸಿರುವ ವಿದ್ಯೆ, ಸಂಪತ್ತು, ನಿರ್ಮಲ ಸುಖ ಸೌಭಾಗ್ಯಗಳಿಗೆ ಅನಂತಾನಂತ ಕೃತಜ್ಞತೆಗಳನ್ನು ಸಲ್ಲಿಸುತ್ತಾ, ಅವಳ ಕೃಪಾಸಾಗರದಲ್ಲಿ ಮುಳುಗಿಸು ಎಂದು ಪ್ರಾರ್ಥಿಸುತ್ತಾ, ದೇವಿಯ ಸನ್ನಿಧಿಯಲ್ಲಿರುವ ಶ್ರೀಚಕ್ರಕ್ಕೆ

ಬಿಂದು ತ್ರಿಕೋಣ, ವಸುಕೋಣ, ದಶಾರಯುಗ್ಮ,
ಮನ್ವಸ್ತ್ರ ನಾಗದಳ ಷೋಡಶ ಪತ್ರಯುಕ್ತಂ।

ವೃತ್ತತ್ರಯಂಚ ಧರಣೀಸದನತ್ರಯಂಚ ಶ್ರೀ ಚಕ್ರರಾಜ ಉದಿತಃ ಪರದೇವತಾಯಾ॥

ಎಂದು ನಮಿಸಿ, ಘಂಟಾನಾದದೊಂದಿಗೆ ದಿವ್ಯಮಂಗಳ ಸ್ವರೂಪಿಣಿಗೆ ಎತ್ತುತ್ತಿರುವ ದಿವ್ಯ ಮಂಗಳಾರತಿಯನ್ನು ನೋಡಿ, ಅರ್ಚಕ ಮಹಾಸ್ವಾಮಿಗಳು ನೀಡಿದ ಮಂಗಳಾರತಿಯನ್ನು ಕಣ್ಣೊತ್ತಿಕೊಂಡು,

ನಮಸ್ತೇ ಶಾರದಾದೇವಿ ಕಾಶ್ಮೀರ ಪುರವಾಸಿನೀಂ।
ತ್ವಾಮಹಂ ಪ್ರಾರ್ಥಯೇ ನಿತ್ಯಂ ವಿದ್ಯಾ ದಾನಂ ಚ ದೇಹಿಮೇ॥
ಯಾ ಶ್ರದ್ಧಾ ಧಾರಣಾ ಮೇಧಾ ವಾಗ್ದೇವೀ ವಿಧಿವಲ್ಲಭಾ।
ಭಕ್ತಜಿಹ್ವಾಗ್ರ ಸದನಾ ಶಮಾದಿ ಗುಣದಾಯಿನೀ॥
ನಮಾಮಿ ಯಾಮಿನೀಂ ನಾಥಲೇಖಾಲಂಕೃತ ಕುಂತಲಾಮ್।
ಭವಾನೀಂ ಭವಸಂತಾಪನಿರ್ವಾಪಣ ಸುಧಾ ನದೀಮ್॥
ಭದ್ರಕಾಳ್ಯೈ ನಮೋ ನಿತ್ಯಂ ಸರಸ್ವತ್ಯೈ ನಮೋ ನಮಃ।
ವೇದ ವೇದಾಂಗ ವೇದಾಂತ ವಿದ್ಯಾ ಸ್ಥಾನೇಭ್ಯ ಏವ ಚ॥
ಬ್ರಹ್ಮಸ್ವರೂಪಾ ಪರಮಾ ಜ್ಯೋತಿರೂಪಾ ಸನಾತನೀ।
ಸರ್ವ ವಿದ್ಯಾದಿದೇವೀಯಾ ತಸ್ಯೈ ವಾಣ್ಯೈ ನಮೋ ನಮಃ॥
ಯಯಾ ವಿನಾ ಜಗತ್ಸರ್ವಂ ಶಶ್ವಜೀವನ್ಮೃತಂ ಭವೇತ್।
ಜ್ಞಾನಾಧಿದೇವೀ ಯಾ ತಸ್ಯೈ ಸರಸ್ವತ್ಯೈ ನಮೋ ನಮಃ॥
ಯಯಾ ವಿನಾ ಜಗತ್ಸರ್ವಂ ಮೂಕಮುನ್ಮತ್ತವತ್ಸದಾ।
ಯಾ ದೇವೀ ವಾಗಧಿಷ್ಠಾತ್ರೀ ತಸ್ಯೈ ವಾಣ್ಯೈ ನಮೋ ನಮಃ॥

ಮಹಾಕಾಳೀ, ಮಹಾಲಕ್ಷ್ಮೀ, ಮಹಾಸರಸ್ವತೀ ಸ್ವರೂಪಳಾಗಿ ವಿರಾಜಮಾನಳಾಗಿರುವ ಶ್ರೀ ಶಾರದಾ ಪರಮೇಶ್ವರಿಯ ಪ್ರಾರ್ಥನೆಯನ್ನು ಅರ್ಚಕರೊಂದಿಗೆ ಧ್ವನಿಗೂಡಿಸಿ, ಅವರು ದೊಡ್ಡ ತಟ್ಟೆಯಲ್ಲಿ ನೀಡಿದ ಶ್ರೀಚಕ್ರದ ಫೋಟೋ, ಕುಂಕುಮ, ಮಿಠಾಯಿ, ಹೂವು ಪ್ರಸಾದವನ್ನು ಸ್ವೀಕರಿಸಿ, ಶಾರದೆಗೆ,

ಪ್ರಣಮಾಮಿ ಸದಾ ಪೂಜ್ಯಾಂ ಶಾರದಾಂ ಸಾರದಾಂ ಮುದಾ

ಎಂದು ವಂದಿಸಿ, ಮೆಟ್ಟಲಿಳಿದು, ಬಲಗಡೆ ಮೇಲೆ ಹಾಕಿರುವ ಜಗದ್ಗುರು ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳ ದೊಡ್ಡ ಚಿತ್ರಕ್ಕೆ ವಂದಿಸಿ,

ನಮಾಮಿ ಭಾರತೀತೀರ್ಥಂ ಯೋಗಿರಾಜಮ್ ಜಗದ್ಗುರುಮ್

ಎನ್ನುತ್ತಾ, ಶ್ರೀ ಶಾರದಾ ದೇವಾಲಯದ ಪ್ರಾಕಾರದೊಳಗಿನ, ಸರ್ವಜ್ಞ ಪೀಠವನ್ನು ಪ್ರತಿನಿಧಿಸುವ, ಬೆಳ್ಳಿಯ ವ್ಯಾಖ್ಯಾನ ಸಿಂಹಾಸನದ ಮೇಲೆ ವಿರಾಜಿಸುತ್ತಿರುವ, ಶ್ರೀ ಶಾರದಾಂಬೆಯ ಉತ್ಸವಮೂರ್ತಿ ಮತ್ತು ಪಕ್ಕದ ದೊಡ್ಡ ಸುವರ್ಣ ಮಂಟಪದಲ್ಲಿರುವ ರಜತ ಜಗದ್ಗುರು ಶ್ರೀ ಶಂಕರ ಭಗವತ್ಪಾದರ ಮೂರ್ತಿಗೆ ನಮಿಸಿ, ಮೊದಲು ವಿದ್ಯಾದಾಯಿನಿಯಾದ ಶ್ರೀ ಶಾರದೆಯ ಸನ್ನಿಧಿಯಲ್ಲಿ ಅಕ್ಷರಾಭ್ಯಾಸ ನೆರವೇರಿಸುತ್ತಿದ್ದ ಮಂಟಪದಲ್ಲಿ ಸಾಲು ಸಾಲಾಗಿ ದೊಡ್ಡ ಗಾಜಿನ ಬೀರುಗಳಲ್ಲಿ ಜೋಡಿಸಿರುವ ದೇವಿಯ ಸಿಂಹ, ಮಯೂರ, ಹಂಸ... ಇತ್ಯಾದಿ ಬೆಳ್ಳಿ ಮತ್ತು ಬಂಗಾರದ ವಾಹನಗಳನ್ನು ನೋಡಿ, ದಶಭುಜಗಳುಳ್ಳ ಶ್ರೀಶಕ್ತಿಗಣಪತಿಗೆ,

ಪ್ರಣಮ್ಯ ಶಿರಸಾ ದೇವಂ ಗೌರೀಪುತ್ರಂ ವಿನಾಯಕಂ।
ಭಕ್ತಾ ವಾಸಂ ಸ್ಮರೇನ್ನಿತ್ಯಂ ಆಯುಷ್ಕಾಮ್ಯಾರ್ಥ ಸಿದ್ಧಯೇ॥

ಎಂದು ವಂದಿಸಿ, ಸಕಲ ದೇವತಾ ಮಂಟಪದಲ್ಲಿರುವ, ಶ್ರೀ ವಿದ್ಯಾರಣ್ಯರು ಪೂಜಿಸುತ್ತಿದ್ದ ಭುವನೇಶ್ವರಿ ವಿಗ್ರಹ ಮತ್ತು ಮೇರು ಶ್ರೀಚಕ್ರ ಯಂತ್ರಗಳಿಗೂ, ಸಾಲಿಗ್ರಾಮಗಳಿಗೂ ನಮಿಸಿ, ಪಕ್ಕದಲ್ಲಿರುವ ಶ್ರೀ ದುರ್ಗಾ ಸಪ್ತಶತಿ ಪಾರಾಯಣ ಮಂಟಪದಲ್ಲಿರುವ ದುರ್ಗೆ, ಶ್ರೀಚಕ್ರಯಂತ್ರಗಳಿಗೆ ನಮಿಸುತ್ತಾ,

ನಮೋ ದೇವ್ಯೈ ಮಹಾದೇವ್ಯೈ ಶಿವಾಯೈ ಸತತಂ ನಮಃ।
ನಮಃ ಪ್ರಕೃತ್ಯೈ ಭದ್ರಾಯೈ ನಿಯತಾ ಪ್ರಣತಾ ಸ್ಮತಾಮ್॥

ಎಂದು ಪ್ರಣತಿ ಸಲ್ಲಿಸಿ, ಎಷ್ಟು ಲಕ್ಷಾಂತರ ಸಪ್ತಶತಿ ಪಾರಾಯಣಗಳು ಈ ಸ್ಥಳದಲ್ಲಿ ನಡೆದು ಎಷ್ಟು ಭಕ್ತರನ್ನು ಶ್ರೀ ಶಾರದಾಂಬೆ, ಲೋಕಮಾತೆ ಪುಣ್ಯದ ಕಡಲಲ್ಲಿ ತೋಯಿಸಿ, ಅವರ ಅಭೀಷ್ಟಗಳನ್ನು ನೆರವೇರಿಸಿದ್ದಾಳೋ ಎಂದು ಅವಳ ಅಪಾರ ಅನುಗ್ರಹವನ್ನು ನೆನೆದು, ಮತ್ತೆ ಮತ್ತೆ ವಂದಿಸಿ, ಪ್ರದಕ್ಷಿಣೆ ಮುಗಿಸಿ, ದಕ್ಷಿಣ ದ್ವಾರದಿಂದ ಹೊರಬಂದಾಗ,

ಶ್ರೀ ಶಾರದಾಂಬೆಯ ಸುಪ್ರಭಾತ ದರ್ಶನ ಮಾಡಿದ ಒಂದು ಅನಿರ್ವಚನೀಯ, ಅಲೌಕಿಕ ಸಂತೃಪ್ತಿ.

ಪ್ರೇಮ, ಕಾರುಣ್ಯ, ಅನುಕಂಪ, ದಯೆಗಳ ಬೆಳಕು ಕಂಡ ಸಮಾಧಾನ ವರ್ಣನಾತೀತ.

॥ ಶ್ರೀ ಜಗದಂಬಾರ್ಪಣಮಸ್ತು ॥

